

ಇತಿಹಾಸದ ಪುಟಗಳನ್ನು ಸೇರಲು ದಿನ ಎಣಿಸುತ್ತಿರುವ ಒಂದೂವರೆ ಶತಮಾನಗಳ ಇತಿಹಾಸದ ಶಾಲೆ

# ಇಂತಿ ನಮಸ್ಕಾರಗಳು

**ಒಂದೂವರೆ ಶತಮಾನದ ಶಾಲೆ! ಇದು ಶ್ರದ್ಧಾಂಜಲಿಯ ಸಮಯ**

■ ನೂತನ ದೋಶೆಟ್ಟಿ

ಅದು 1864ನೇ ಇಸವಿ. ಹಾಸನದಲ್ಲಿ ಆ ವರ್ಷದ ಫೆಬ್ರುವರಿ 1ರಂದು 'ಬಾಲಕರ ಸರ್ಕಾರಿ ಪ್ರೌಢಶಾಲೆ' ಆರಂಭವಾಯಿತು. ಅದರ ಪ್ರಥಮ ಮುಖ್ಯೋಪಾಧ್ಯಾಯರು ಜೆ. ಹಾರ್ಡ್ವೆಲ್ ಎಂಬ ಬ್ರಿಟಿಷ್ ಪ್ರಜೆ. ಹಾಸನದ ಸುತ್ತಮುತ್ತ ಆಗ ಇದ್ದದ್ದು ಅದೊಂದೇ ಶಾಲೆ. ಆ ಕಾಲದಲ್ಲೇ ಕನ್ನಡ ಹಾಗೂ ಇಂಗ್ಲಿಷ್ ಎರಡು ಭಾಷೆಗಳಲ್ಲೂ ಶಿಕ್ಷಣ ನೀಡುತ್ತಿದ್ದ ಶಾಲೆಯದು. ಆಗ ಅದನ್ನು ಉನ್ನತ ಬಾಲಕರ ಪ್ರೌಢಶಾಲೆ ಎಂದು ಕರೆಯಲಾಗುತ್ತಿತ್ತು.

1864ರಿಂದ 1907ರವರೆಗೆ ಆ ಶಾಲೆಯಲ್ಲಿ ಬ್ರಿಟಿಷ್ ಮುಖ್ಯೋಪಾಧ್ಯಾಯರೇ ಇದ್ದರು. 1907ರಲ್ಲಿ ಶ್ರೀನಿವಾಸ ಅಯ್ಯಂಗಾರ್ ಎಂಬುವವರು ಕರ್ನಾಟಕ ಮೂಲದ ಮೊದಲ ಮುಖ್ಯೋಪಾಧ್ಯಾಯರಾಗಿ ನೇಮಕವಾದರು. ಆ ನಂತರದಲ್ಲಿ ಕರ್ನಾಟಕ ಮೂಲದವರೇ ಮುಖ್ಯೋಪಾಧ್ಯಾಯ ಹುದ್ದೆಗೆ ಬಂದರು. 1991ರಲ್ಲಿದ್ದ ನಿರ್ವಾಣಿ ಗೌಡ ಎಂಬುವವರು ಕಡೆಯ ಮುಖ್ಯೋಪಾಧ್ಯಾಯರು. 1990ರಲ್ಲಿ 750ಕ್ಕೂ ಹೆಚ್ಚು ಮಕ್ಕಳಿರುವ ಶಾಲೆಗಳನ್ನು 'ಸಂಯುಕ್ತ ಪದವಿ ಪೂರ್ವ ಕಾಲೇಜು' ಎಂದು ಸರ್ಕಾರ ಬದಲಾವಣೆ ಮಾಡಿದ್ದರಿಂದ, ಸೆ. 27, 1990ರಿಂದ ಆ ಶಾಲೆಯಲ್ಲಿ ಸಂಯುಕ್ತ ಪದವಿಪೂರ್ವ ಕಾಲೇಜು ಆರಂಭವಾಯಿತು. ಅಂದಿನಿಂದ ಪ್ರಾಂಶುಪಾಲರು ಇದರ ಮುಖ್ಯಸ್ಥರಾದರು. ಮುಖ್ಯೋಪಾಧ್ಯಾಯರನ್ನು ಉಪಪ್ರಾಂಶುಪಾಲರು ಎಂದು ಕರೆಯಲಾಯಿತು. ಸಿ.ಎಸ್. ವೆಂಕಟೇಗೌಡರು ಪ್ರೌಢಶಾಲೆಯ ಪ್ರಥಮ ಉಪ ಪ್ರಾಂಶುಪಾಲರಾದರು.

ಮೇಲಿನ ವಿವರಗಳನ್ನು ಓದುವಾಗ ಇತಿಹಾಸದ ಒಂದು ಪಾಠವನ್ನು ಓದುತ್ತಿರುವಂತಿದೆ ಅಲ್ಲವೆ? ಇಂಥ ಪರಂಪರೆಯನ್ನು ಹೊಂದಿರುವ 'ಬಾಲಕರ ಸರ್ಕಾರಿ ಪ್ರೌಢಶಾಲೆ' ಹಾಸನ ಜಿಲ್ಲೆಯ ಹೆಮ್ಮೆ. ಇಂದಿಗೂ ಹಾಸನದ ಪ್ರತಿಷ್ಠಿತ ಹಿಮ್ಸ್ ಆಸ್ಪತ್ರೆಯ ಹಿಂಭಾಗದಲ್ಲಿ ವಿಶಾಲವಾದ ಆವರಣದಲ್ಲಿ ಶಾಲೆ ಕಾರ್ಯ ನಿರ್ವಹಿಸುತ್ತಿದೆ. ಆವರಣದಲ್ಲಿ ಶತಮಾನದ ನೆನಪಿನ ಕಟ್ಟಡವೂ ಇರುವ ಈ